# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಬಿಡಿ/647/2022 ಬಹುಮಹಡಿಗಳ ಕಟ್ಟಡ,
ಮಂಡನಾಧಿಕಾರಿಗಳ ಶಾಖೆ, ಪಿ.ಓ. ಎ.ಆರ್.ಇ.17 ಡಾ: ಅಂಬೇಡ್ಕರ್ ವೀದಿ,ಬೆಂಗಳೂರು,
ದಿನಾಂಕ: 16/09/2022

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3)ರ ಅನ್ವಯ ವರದಿ

*****

ವಿಷಯ: ಸರ್ಕಾರಿ ನೌಕರರಾದ ಶ್ರೀ ಎಸ್. ಯಶವಂತ್ ಬಿನ್ ಜಿ. ಎಸ್. ಶಿವರುದ್ರಪ್ಪ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಸೊರಬ, ಶಿವಮೊಗ್ಗ ಇವರು ಕರ್ತವ್ಯ ಲೋಪ/ದುರ್ನಡತೆ ಎಸಗಿರುವ ಬಗ್ಗೆ.

*****

1) ಶಿವಮೊಗ್ಗ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ ವರದಿಯಲ್ಲಿ ಶ್ರೀ ಎಸ್. ಯಶವಂತ್ ಬಿನ್ ಜಿ. ಎಸ್. ಶಿವರುದ್ರಪ್ಪ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ಸೊರಬ, ಶಿವಮೊಗ್ಗ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ಶ್ರೀ ಜೆ. ಎಸ್. ತಿಪ್ಪೇಸ್ವಾಮಿ, ಪೊಲೀಸ್ ಇನಸ್ಪೆಕ್ಟರ್, ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆ, ಶಿವಮೊಗ್ಗ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರಿಗೆ ಬಂದ ಮಾಹಿತಿಯ ಮೇರೆಗೆ ಗೌಪ್ಯ ಮಾಹಿತಿಯನ್ನು ಸಂಗ್ರಹಿಸಿ, ಸೋರ್ಸ್ ವರದಿಯನ್ನು ಪೊಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಪೂರ್ವ ವಲಯ, ದಾವಣಗೆರೆರವರಿಗೆ ಸಲ್ಲಿಸಿದ್ದು, ನಂತರ ಪೊಲೀಸ್ ಅಧೀಕ್ಷಕರು ಸದರಿ ಸೋರ್ಸ್ ವರದಿಯ ಆಧಾರದ ಮೇಲೆ ಭ್ರಷ್ಟಾಚಾರ ನಿಗ್ರಹ ದಳ, ಶಿವಮೊಗ್ಗ ಆರಕ್ಷಕ ನಿರೀಕ್ಷಕರಿಗೆ ಎದುರುದಾರರ ವಿರುದ್ಧ ಸ್ವಯಂ ದೂರು ದಾಖಲಿಸಲು ಆದೇಶ ಮಾಡಿದ್ದು, ಎದುರುದಾರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 1966 ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021) ರ ನಿಯಮಗಳನ್ನು ಪಾಲಿಸದೆ ದುರ್ನಡತೆ ತೋರಿಸಿರುತ್ತಾರೆ ಎನ್ನುವುದು

ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರವರು ತನಿಖೆ ಕೈಗೊಂಡಿರುತ್ತಾರೆ.

2) <u>ದೂರಿನ ಸಂಕ್ಷಿಪ್ತ ವಿವರಣೆ:-</u> ದೂರುದಾರರಿಗೆ ಗೌಪ್ಯ ಮಾಹಿತಿಯನ್ನು ಸಂಗ್ರಹಿಸಿ, ಸೋರ್ಸ್ ವರದಿಯನ್ನು ಪೊಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಪೂರ್ವ ವಲಯ, ದಾವಣಗೆರೆ ರವರಿಗೆ ಸಲ್ಲಿಸಿದ್ದು, ನಂತರ ಪೊಲೀಸ್ ಅಧೀಕ್ಷಕರು ಸೋರ್ಸ್ ವರದಿಯ ಆಧಾರದ ಮೇಲೆ ಭ್ರಷ್ಟಾಚಾರ ನಿಗ್ರಹ ದಳ, ಶಿವಮೊಗ್ಗ ಆರಕ್ಷಕ ನಿರೀಕ್ಷಕರಿಗೆ ಎದುರುದಾರರ ವಿರುದ್ಧ ಸ್ವಯಂ ದೂರು ದಾಖಲಿಸಲು ಆದೇಶ ಮಾಡಿದ್ದು, ಅದರನ್ವಯ ಶಿವಮೊಗ್ಗ ಭ್ರಷ್ಟಾಚಾರ ನಿಗ್ರಹ ದಳ ಪೊಲೀಸ್ ಠಾಣೆಯ ಗುನ್ನೆ ನಂ. 10/2018 ರಲ್ಲಿ ಕಲಂ 13 (1)(ಇ) ಸಹ ಕಲಂ 13(2) ಪಿ.ಸಿ. ಕಾಯಿದೆ 1988 ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿರುತ್ತಾರೆ.

3) ತನಿಖಾಧಿಕಾರಿಗಳು ಪ್ರಕರಣದ ತನಿಖೆಯ ಸಮಯದಲ್ಲಿ ಎದುರುದಾರರು ದಿನಾಂಕ 07/09/2007 ರಿಂದ ದಿ: 24/07/2018 ರ ವರೆಗೆ ಅವರ ಸೇವಾ ಅವಧಿಯಲ್ಲಿ ತಾಯಿ ಶ್ರೀಮತಿ ಜಯಶೀಲಮ್ಮನವರ ಹೆಸರಿನಲ್ಲಿ ನಿವೇಶನ ಹಾಗೂ ಜಮೀನುಗಳನ್ನು ಖರೀದಿ ಮಾಡುವಾಗ, ಸಕ್ಷಮ ಪ್ರಾಧಿಕಾರದ ಗಮನಕ್ಕೆ ತಂದು ಪೂರ್ವಾನುಮತಿ ಪಡೆಯದೆ ಕೆ.ಸಿ.ಎಸ್.ಆರ್. (ನಡತೆ) ನಿಯಮಗಳು 1966 ರ ನಿಯಮ 23 (2)ರ ಉಲ್ಲಂಘನೆ ಮಾಡಿರುತ್ತಾರೆ. ಈ ಕೆಳಕಂಡ ಸ್ಥಿರಾಸ್ತಿ ಹಾಗೂ ಚರಾಸ್ತಿಗಳನ್ನು ಸಂಪಾದಿಸಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ.

| | |
|---|---|
| 1 | ಎದುರುದಾರರು ತಮ್ಮ ತಾಯಿ ಶ್ರೀಮತಿ ಜಯಶೀಲಮ್ಮನವರ ಹೆಸರಿನಲ್ಲಿ ಖರೀದಿಸಿರುವ ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕು ಚಂದ್ರಗುತ್ತಿ ಹೋಬಳಿ ಮಂಗಳೂರು ಗ್ರಾಮದ ಸರ್ವೆ ನಂ. 212 ರಲ್ಲಿ 5 ಎಕರೆ ಜಮೀನನ್ನು ರೂ.2,55,000/- ಗಳಿಗೆ ಖರೀದಿಸಿರುತ್ತಾರೆ. ಇದನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಪ್ರಕಾರ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ. |
| 2 | ಎದುರುದಾರರು ತಮ್ಮ ತಾಯಿ ಶ್ರೀಮತಿ ಜಯಶೀಲಮ್ಮನವರ ಇವರ ಹೆಸರಿನಲ್ಲಿ ಚಂದ್ರಗುತ್ತಿ ಹೋಬಳಿ ಮಂಗಳೂರು ಗ್ರಾಮದ ಸರ್ವೆ ನಂ. 212 ರಲ್ಲಿ ನಿರ್ಮಾಣ ಮಾಡಿದ ವಾಸದ ಮನೆ, ಪ್ಯಾಕ್ ಹೌಸ್ ಮತ್ತು ತಂತಿ ಬೇಲಿಯನ್ನು ನಿರ್ಮಾಣ ಮಾಡಿದ ಮೌಲ್ಯ ರೂ. 6,09,170/-. ಇದನ್ನು ಮಾಡುವ |

| | |
|---|---|
| | ಪೂರ್ವದಲ್ಲಿ/ನಂತರದಲ್ಲಿ ಸಕ್ಷಮ ಪ್ರಾಧಿಕಾರದಿಂದ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಪ್ರಕಾರ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ. ಸದರಿ ಮನೆಯನ್ನು ನಿರ್ಮಿಸಿದ ಬಗ್ಗೆ ಎದುರುದಾರರು ಪೋಲೀಸರಿಗೆ ಸಲ್ಲಿಸಿದ ಸ್ಟೇಟ್‌ಮೆಂಟ್‌ಗಳಲ್ಲಿ ಯಾವುದೇ ಮಾಹಿತಿಯನ್ನು ಒದಗಿಸಿರುವುದಿಲ್ಲ ಹಾಗೂ ಸಕ್ಷಮ ಪ್ರಾಧಿಕಾರಕ್ಕೆ ವರದಿ ಮಾಡಿರುವುದಿಲ್ಲ. |
| 3 | ಎದುರುದಾರರು ತಮ್ಮ ತಾಯಿ ಶ್ರೀಮತಿ ಜಯಶೀಲಮ್ಮನವರ ಹೆಸರಿನಲ್ಲಿ ಸಾಗರ ನಗರ ಸಭೆ ವಾರ್ಡ್ ನಂ. 7/17 ರ ಸ. ನಂ. 67/1 ರಲ್ಲಿ 30 * 40 ಅಡಿ ಉದ್ದಳತೆಯ ನಿವೇಶನ ಸಂಖ್ಯೆ 22 ರ ನಿವೇಶನವನ್ನು ರೂ. 1,75,000/- ಗಳಿಗೆ ಖರೀದಿ ಮಾಡಿರುತ್ತಾರೆ. ಇದನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಪ್ರಕಾರ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ. |
| 4 | ಎದುರುದಾರರು ತಮ್ಮ ತಾಯಿ ಶ್ರೀಮತಿ ಜಯಶೀಲಮ್ಮನವರ ಹೆಸರಿನಲ್ಲಿ ಸಾಗರ ನಗರ ಸಭೆ ವಾರ್ಡ್ ನಂ.-7/17 ರ ಸ. ನಂ. -67/1 ರಲ್ಲಿ 20 * 30 ಅಡಿ ಉದ್ದಳತೆಯ ನಿವೇಶನ ಸಂಖ್ಯೆ 39 ರ ನಿವೇಶನವನ್ನು ರೂ. 45,000/- ಗಳಿಗೆ ಖರೀದಿ ಮಾಡಿರುತ್ತಾರೆ. ಇದನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಪ್ರಕಾರ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ. ಈ ನಿವೇಶನ ಖರೀದಿ ಬಗ್ಗೆ ಎದುರುದಾರರು ಪೋಲೀಸರಿಗೆ ಸಲ್ಲಿಸಿದ ಸ್ಟೇಟ್‌ಮೆಂಟ್‌ಗಳಲ್ಲಿ ಯಾವುದೇ ಮಾಹಿತಿಯನ್ನು ಒದಗಿಸಿರುವುದಿಲ್ಲ. |
| 5 | ಎದುರುದಾರರು ತಮ್ಮ ತಾಯಿ ಶ್ರೀಮತಿ ಜಯಶೀಲಮ್ಮನವರ ಹೆಸರಿನಲ್ಲಿ ಸಾಗರ ನಗರ ಸಭೆ ವಾರ್ಡ್ ನಂ.-7/17 ರ ಸ. ನಂ. -67/1 ರಲ್ಲಿ 30 * 50 ಅಡಿ ಉದ್ದಳತೆಯ ನಿವೇಶನ ಸಂಖ್ಯೆ 39 ರ ನಿವೇಶನವನ್ನು ರೂ. 3,43,000/- ಗಳಿಗೆ ಖರೀದಿ ಮಾಡಿರುತ್ತಾರೆ. ಇದನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಪ್ರಕಾರ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ. ಈ ನಿವೇಶನ ಖರೀದಿ ಬಗ್ಗೆ ಎದುರುದಾರರು ಪೋಲೀಸರಿಗೆ ಸಲ್ಲಿಸಿದ ಸ್ಟೇಟ್‌ಮೆಂಟ್‌ಗಳಲ್ಲಿ ಯಾವುದೇ ಮಾಹಿತಿಯನ್ನು ಒದಗಿಸಿರುವುದಿಲ್ಲ. |

| | |
|---|---|
| 6 | ಎದುರುದಾರರು ತಮ್ಮ ತಾಯಿ ಶ್ರೀಮತಿ ಜಯಶೀಲಮ್ಮನವರ ಹೆಸರಿನಲ್ಲಿ ಸಾಗರ ನಗರ ಸಭೆ ವಾರ್ಡ್ ನಂ.-7/17 ರಲ್ಲಿರುವ ಖಾಲಿ ನಿವೇಶನ ಸಂಖ್ಯೆ 22 ಮತ್ತು 39 ರಲ್ಲಿ ನಿರ್ಮಾಣ ಹಂತದಲ್ಲಿರುವ ಮನೆಯನ್ನು ರೂ. 13,16,979/- ಗಳಿಗೆ ನಿರ್ಮಾಣ ಮಾಡಿದ ಮೌಲ್ಯ ಇದನ್ನು ನಿರ್ಮಿಸುವ ಪೂರ್ವದಲ್ಲಿ/ ನಂತರದಲ್ಲಿ ಸಕ್ಷಮ ಪ್ರಾಧಿಕಾರದಿಂದ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಪ್ರಕಾರ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ. ಈ ನಿವೇಶನ ಖರೀದಿ ಬಗ್ಗೆ ಎದುರುದಾರರು ಪೋಲೀಸರಿಗೆ ಸಲ್ಲಿಸಿದ ಸ್ಟೇಟ್‌ಮೆಂಟ್‌ಗಳಲ್ಲಿ ಯಾವುದೇ ಮಾಹಿತಿಯನ್ನು ಒದಗಿಸಿರುವುದಿಲ್ಲ. |
| 7 | ಎದುರುದಾರರು ತಮ್ಮ ತಾಯಿ ಶ್ರೀಮತಿ ಜಯಶೀಲಮ್ಮನವರ ಹೆಸರಿನಲ್ಲಿ ಸೊರಬ ತಾಲ್ಲೂಕು ಚಂದ್ರಗುತ್ತಿ ಹೋಬಳಿ, ಚಂದ್ರಗುತ್ತಿ ಗ್ರಾಮದ ಸರ್ವೆ ನಂ. 139/4 ರಲ್ಲಿ ಒಟ್ಟು 6 ಗುಂಟೆ ಜಮೀನನ್ನು ರೂ. 13,05,000/- ಗಳಿಗೆ ಖರೀದಿ ಮಾಡಿದ್ದು ನೋಂದಣಿ ಮಾಡುವಾಗ ಶುಲ್ಕ ಉಳಿತಾಯ ಮಾಡುವಾಗ ರೂ. 5,55,000/- ಮಾತ್ರ ಕ್ರಯ ಪತ್ರದಲ್ಲಿ ಖರೀದಿ ಮಾಡಿದಂತೆ ತೋರಿಸಿ ಉಳಿದ ರೂ. 7,50,000/- ಗಳನ್ನು ಜಮೀನು ಖರೀದಿ ಸಮಯದಲ್ಲಿ ಇದ್ದ ಮಧ್ಯವರ್ತಿಗಳಾದ ದತ್ತಾತ್ರೇಯ ವಿ. ಹೆಗಡೆ ಮತ್ತು ನಾರಾಯಣಪ್ಪರವರಿಗೆ ಚೆಕ್ ಮೂಲಕ ಕ್ರಯ ನೀಡಿದ ದಿನಾಂಕ 02/02/2018 ರಂದು ಕ್ರಮವಾಗಿ 4,00,000/- ಮತ್ತು 3,50,000/- ರೂ.ಗಳನ್ನು ನೀಡಿದ್ದು ಇರುತ್ತದೆ. ಈ ಬಗ್ಗೆ ಸದರಿ ಜಮೀನನ್ನು ಖರೀದಿಸುವ ಪೂರ್ವದಲ್ಲಿ ಸಕ್ಷಮ ಪ್ರಾಧಿಕಾರದಿಂದ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಪ್ರಕಾರ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ. |
| 8 | ಎದುರುದಾರರು ತಮ್ಮ ತಾಯಿ ಶ್ರೀಮತಿ ಜಯಶೀಲಮ್ಮನವರ ಹೆಸರಿನಲ್ಲಿ ಕೆನರಾ ಬ್ಯಾಂಕ್, ಚಂದ್ರಗುತ್ತಿ ಶಾಖೆ, ಸೊರಬ ತಾಲ್ಲೂಕು ಇಲ್ಲಿರುವ ಎಸ್. ಬಿ ಖಾತೆ ಸಂಖ್ಯೆ 1515101010068 ರಲ್ಲಿರುವ ಅಂತಿಮ ಶಿಲ್ಕು ರೂ. 2,60,385-74 ಗಳಾಗಿದ್ದು ಈ ಬಗ್ಗೆ ಸಕ್ಷಮ ಪ್ರಾಧಿಕಾರಕ್ಕೆ ತಿಳಿಸಿರುವುದಿಲ್ಲ. |

4) ತನಿಖಾಧಿಕಾರಿಗಳು ಪ್ರಕರಣದ ತನಿಖೆಯ ಸಮಯದಲ್ಲಿ ಕೆಳ ಕಂಡ ಚರಾಸ್ತಿ, ಸ್ಥಿರಾಸ್ತಿಗಳ ಬಗ್ಗೆ ಎದುರುದಾರರು ದಿನಾಂಕ 07/09/2007 ರಿಂದ ದಿ: 24/07/2018 ರ ವರೆಗೆ ತಮ್ಮ ಸೇವಾ ಅವಧಿಯಲ್ಲಿ ತಂದೆ ಶ್ರೀ ಯಶವಂತ

ರವರ ಹೆಸರಿನಲ್ಲಿ ನಿವೇಶನ ಹಾಗೂ ಜಮೀನುಗಳನ್ನು ಖರೀದಿ ಮಾಡುವಾಗ, ಸಕ್ಷಮ ಪ್ರಾಧಿಕಾರದ ಗಮನಕ್ಕೆ ತಂದು ಪೂರ್ವಾನುಮತಿ ಪಡೆಯದೆ ಕೆ.ಸಿ.ಎಸ್.ಆರ್. (ನಡತೆ) ನಿಯಮಗಳು 1966 ರ ನಿಯಮ 23 (2)ರ ಉಲ್ಲಂಘನೆ ಮಾಡಿರುತ್ತೀರಿ. ಈ ಕೆಳಕಂಡ ಸ್ಥಿರಾಸ್ತಿ ಹಾಗೂ ಚರಾಸ್ತಿಗಳನ್ನು ಸಂಪಾದಿಸಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ.

| | |
|---|---|
| 1 | ಎದುರುದಾರರು ತಮ್ಮ ತಂದೆಯಾದ ಶ್ರೀ ಶಿವರುದ್ರಪ್ಪರವರ ಹೆಸರಿನಲ್ಲಿ ಎಲ್.ಐ.ಜಿ.-62/ಎ, 3ನೇ ತಿರುವು, 2ನೇ ಹಂತ, ಬಿ ಬ್ಲಾಕ್, ಕಲ್ಲಹಳ್ಳಿ, ವಿನೋಬನಗರ, ಶಿವಮೊಗ್ಗದಲ್ಲಿ 2 ಅಂತಸ್ತಿನ ಆರ್. ಸಿ. ಸಿ. ಮನೆಯನ್ನು ರೂ. 14,57,271/- ಗಳಿಗೆ ನಿರ್ಮಿಸಿರುತ್ತಾರೆ. ಇದನ್ನು ನಿರ್ಮಿಸುವ ಪೂರ್ವದಲ್ಲಿ/ ನಂತರ ಸಕ್ಷಮ ಪ್ರಾಧಿಕಾರಕ್ಕೆ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಅಡಿ ತಿಳಿಸಿರುವುದಿಲ್ಲ. |
| 2 | ಎದುರುದಾರರು ತಮ್ಮ ತಂದೆಯಾದ ಶ್ರೀ ಶಿವರುದ್ರಪ್ಪ ರವರ ಹೆಸರಿನಲ್ಲಿ ಕೆ.ಎ.-14 ಎಎಫ್-1819 ರಾಯಲ್ ಎನ್‌ಫೀಲ್ಡ್ ಬೈಕ್‌ನ್ನು ರೂ. 1,19,182/- ಗಳಿಗೆ ಖರೀದಿಸಿರುತ್ತಾರೆ. ಇದನ್ನು ಖರೀದಿಸಿದ ನಂತರ ಸಕ್ಷಮ ಪ್ರಾಧಿಕಾರಕ್ಕೆ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಅಡಿ ತಿಳಿಸಿರುವುದಿಲ್ಲ. |
| 3 | ಎದುರುದಾರರು ತಮ್ಮ ತಂದೆಯಾದ ಶ್ರೀ ಶಿವರುದ್ರಪ್ಪರವರ ಹೆಸರಿನಲ್ಲಿ ಫೋರ್ಡ್ ಫೀಗೋ ಕಾರ್ ಕೆ.ಎ.14 ಎನ್ -3041 ವಾಹನವನ್ನು ರೂ. 4,97,767/- ಗಳಿಗೆ ಖರೀದಿಸಿರುತ್ತರೆ. ಇದನ್ನು ಖರೀದಿಸಿದ ನಂತರ ಸಕ್ಷಮ ಪ್ರಾಧಿಕಾರಕ್ಕೆ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಅಡಿ ತಿಳಿಸಿರುವುದಿಲ್ಲ. |
| 4 | ಎದುರುದಾರರು ತಮ್ಮ ತಂದೆಯಾದ ಶ್ರೀ ಶಿವರುದ್ರಪ್ಪ ರವರ ಹೆಸರಿನಲ್ಲಿ ಮಾರುತಿ ಓಮ್ನಿ ಕಾರ್ ಕೆ.ಎ.-02 ಪಿ-1170 ವಾಹನವನ್ನು ರೂ. 70,000/- ಗಳಿಗೆ ಖರೀದಿಸಿರುತ್ತಾರೆ. ಇದನ್ನು ಖರೀದಿಸಿದ ನಂತರ ಸಕ್ಷಮ ಪ್ರಾಧಿಕಾರಕ್ಕೆ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಅಡಿ ತಿಳಿಸಿರುವುದಿಲ್ಲ. |
| 5 | ಎದುರುದಾರರು ತಮ್ಮ ತಂದೆಯಾದ ಶ್ರೀ ಶಿವರುದ್ರಪ್ಪ ರವರ ಹೆಸರಿನಲ್ಲಿ ಪಲ್ಸರ್ ಬೈಕ್ ನಂ. ಕೆಎ-14-ಎಕ್ಸ್-7806 ವಾಹನವನ್ನು ರೂ. 81,351/- ಗಳಿಗೆ |

| | |
|---|---|
| | ಖರೀದಿಸಿರುತ್ತಾರೆ. ಇದನ್ನು ಖರೀದಿಸಿದ ನಂತರ ಸಕ್ಷಮ ಪ್ರಾಧಿಕಾರಕ್ಕೆ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಅಡಿ ತಿಳಿಸಿರುವುದಿಲ್ಲ. |
| 6 | ಎದುರುದಾರರು ತಮ್ಮ ತಂದೆಯಾದ ಶ್ರೀ ಶಿವರುದ್ರಪ್ಪ ರವರ ಹೆಸರಿನಲ್ಲಿ ಹೀರೋ ಹೊಂಡಾ ಬೈಕ್ ನಂ. ಕೆ.ಎ.-14 ವಿ-7859 ವಾಹನವನ್ನು ರೂ. 40,090/- ಗಳಿಗೆ ಖರೀದಿಸಿರುತ್ತಾರೆ. ಇದನ್ನು ಖರೀದಿಸಿದ ನಂತರ ಸಕ್ಷಮ ಪ್ರಾಧಿಕಾರಕ್ಕೆ ನಿಯಮ 23 ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ 1966 ನೇದರ ಅಡಿ ತಿಳಿಸಿರುವುದಿಲ್ಲ. |

5) ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ತನ್ನ ತಂದೆ ತಾಯಿಯವರು 'ಕುಟುಂಬ ಸದಸ್ಯರು' ಎಂಬ ಪರಿಭಾಷೆಯಲ್ಲಿ ಬರುವುದಿಲ್ಲ. ತನ್ನ ತಂದೆ ಕರ್ನಾಟಕ ಸರ್ಕಾರ, ಇಂಜನೀಯರಿಂಗ್ ಇಲಾಖೆಯಲ್ಲಿ ದಿನಾಂಕ 18/10/1973 ರಿಂದ 31/10/2010 ರ ವರೆಗೆ ಸೇವೆ ಸಲ್ಲಿಸಿರುತ್ತಾರೆ. ತನ್ನ ತಂದೆ ತಾಯಿ ಮತ್ತು ಅಣ್ಣ ತಮ್ಮಂದಿರು ಪ್ರತ್ಯೇಕವಾಗಿ ವಾಸವಾಗಿದ್ದು ತಂದೆಯವರ ಪಿಂಚಣಿ ಮತ್ತು ಕೃಷಿ ಆದಾಯದಿಂದ ಸ್ವತಂತ್ರವಾಗಿ ಜೀವನ ನಡೆಸುತ್ತಿದ್ದಾರೆ. ಅವರು ಯಾವ ವಿಧದಲ್ಲಿಯೂ ತಮಗೆ ಅವಲಂಬಿತರಾಗಿರುವುದಿಲ್ಲ ಎಂದು ಮಾತ್ರ ಉಲ್ಲೇಖಿಸಿರುತ್ತಾರೆ. ಈ ಬಗ್ಗೆ ಯಾವುದೇ ದಾಖಲಾತಿಗಳನ್ನು ಎದುರುದಾರರು ತಮ್ಮ ಸಮಜಾಯಿಷಿಯ ಜೊತೆ ಸಲ್ಲಿಸಿರುವುದಿಲ್ಲ. ಅವರ ತಾಯಿ ಯಾವುದೇ ಉದ್ಯೋಗದಲ್ಲಿದ್ದ ಬಗ್ಗೆ ವಿವರಣೆ ನೀಡಿರುವುದಿಲ್ಲ. ಆದ್ದರಿಂದ ಎದುರುದಾರರು ತಮ್ಮ ಅನಧಿಕೃತ ಆದಾಯದಿಂದಲೇ ಮೇಲ್ಕಂಡ ಆಸ್ತಿಗಳನ್ನು ತನ್ನ ತಂದೆ ತಾಯಿಯ ಹೆಸರಿನಲ್ಲಿ ಚರ ಮತ್ತು ಸ್ಥಿರಾಸ್ತಿಗಳನ್ನು ಖರೀದಿಸಿರುವುದರಿಂದ ತನಿಖಾಧಿಕಾರಿಯವರು ಅವುಗಳ ಮೌಲ್ಯಗಳನ್ನು ಗಣನೆಗೆ ತೆಗೆದುಕೊಂಡು ಎದುರುದಾರರ ಬಲ್ಲ ಮೂಲಗಳ ಆದಾಯಕ್ಕಿಂತ 24.33% ಅಧಿಕವಾಗಿ ಮೌಲ್ಯದ ಆಸ್ತಿಗಳನ್ನು ಹೊಂದಿರುವುದು ತನಿಖೆಯಿಂದ ಸಂಗ್ರಹಿಸಿದ ಸಾಕ್ಷ್ಯಾಧಾರಗಳಿಂದ ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ ಎಂದು ದೋಷಾರೋಪಣ ಪಟ್ಟಿಯನ್ನು 1ನೇ ಅಧಿಕ ಜಿಲ್ಲಾ ಮತ್ತು ಸತ್ರ ವಿಶೇಷ ನ್ಯಾಯಾಲಯ, ಶಿವಮೊಗ್ಗದಲ್ಲಿ ಸಲ್ಲಿಸಿರುತ್ತಾರೆ. ಎದುರುದಾರರು ಮೇಲ್ಕಂಡ ಸ್ಥಿರ ಮತ್ತು ಚರಾಸ್ತಿಗಳನ್ನು ತಮ್ಮ ತಂದೆಯ ಆದಾಯ ಹಾಗೂ ಕೃಷಿ ಆದಾಯದಿಂದಲೇ ಖರೀದಿಸಿರುವ ಬಗ್ಗೆ ತನಿಖಾಧಿಕಾರಿಯವರ ಮುಂದೆಯಾಗಲೀ, ಅಥವಾ ತಮ್ಮ ಪರಿವೀಕ್ಷಣಾ ಟಿಪ್ಪಣಿಗೆ

ನೀಡಿದ ಸಮಜಾಯಿಷಿಯ ಜೊತೆಗಾಗಲೀ ಯಾವುದೇ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಮೇಲ್ಕಂಡ ಸ್ಥಿರ ಮತ್ತು ಚರಾಸ್ತಿಗಳನ್ನು ಎದುರುದಾರರ ಅನಧಿಕೃತ ಆದಾಯದಿಂದಲೇ ಖರೀದಿಸಿರುವುದರಿಂದ ಮತ್ತು ಚರಾಸ್ತಿಗಳ ಬಗ್ಗೆ ಸಕ್ಷಮ ಪ್ರಾಧಿಕಾರಕ್ಕೆ ಒಂದು ತಿಂಗಳೊಳಗಾಗಿ ತಿಳಿಸಿ ಅನುಮೋದನೆ ಪಡೆದ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸದೇ ಇರುವುದರಿಂದ ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ ಎದುರುದಾರರ ಮೇಲ್ಕಂಡ ಕರ್ತವ್ಯ ಲೋಪದ ಬಗ್ಗೆ ನಮೂದಿಸಿರುತ್ತಾರೆ.

6) ಎದುರುದಾರರು ತನಿಖೆ ಕಾಲದಲ್ಲಿ ಯಾವುದೇ ಸ್ಥಿರಾಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಮತ್ತು ಚರಾಸ್ತಿಯನ್ನು ಖರೀದಿಸಿದ ನಂತರ ಕ್ರಮವಾಗಿ ಸಕ್ಷಮ ಪ್ರಾಧಿಕಾರದ ಪೂರ್ವಾನುಮತಿಯನ್ನು ಪಡೆಯದೆ, ಚರಾಸ್ತಿಯನ್ನು ಖರೀದಿಸಿದ ನಂತರ ಸಕ್ಷಮ ಪ್ರಾಧಿಕಾರಕ್ಕೆ ತಿಳಿಸದೆ ಇರುವ ಕಾರಣ ನಿಯಮ 23 (2)(3) ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ನಿಯಮ 24 (3) (4) ರನ್ವಯ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021) ರ ನಿಯಮಗಳನ್ನು ಪಾಲಿಸದೆ ಕರ್ತವ್ಯ ಲೋಪವೆಸಗಿರುವುದು ಮತ್ತು ಪ್ರಸ್ತುತ ಕ.ನಾ.ಸೇ.(ನಡತೆ) ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

7) ತನಿಖಾಧಿಕಾರಿಯವರು ಸಂಗ್ರಹಿಸಿದ ದಾಖಲೆಗಳಿಂದ ಎದುರುದಾರರು ಕಾನೂನು ಸಮ್ಮತ ಆದಾಯಕ್ಕಿಂತ ಅಸಮತೋಲನವಾಗಿ ಆಸ್ತಿಗಳನ್ನು ಎದುರುದಾರರ ಹೆಸರಿನಲ್ಲಿ ಹೊಂದಿರುವುದು ಹಾಗೂ ಅನುಮತಿ ಇಲ್ಲದೆ ಸ್ಥಿರಾಸ್ತಿ/ಚರಾಸ್ತಿಯನ್ನು ಖರೀದಿಸಿರುವುದು ಹಾಗೂ ಇತರೆ ಅಂಶಗಳು ಎದುರುದಾರರು ನಿಯಮಗಳನ್ನು ಪಾಲಿಸದೇ ಇರುವುದು ಎದುರುದಾರರ ದುರ್ನಡತೆಯನ್ನು ತೋರಿಸುತ್ತದೆ.

8) ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಸಮಜಾಯಿಷಿಯನ್ನು ದಿನಾಂಕ 17/06/2022 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ ಎದುರುದಾರರು ಪರಿವೀಕ್ಷಣಾ ಟಿಪ್ಪಣಿಯ ಎಲ್ಲಾ ಆಪಾದನೆಗಳನ್ನು ನಿರಾಕರಿಸಿರುತ್ತಾರೆ. ಮುಂದುವರೆದು ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ ತಮ್ಮ ತಂದೆ ಶಿವರುದ್ರಪ್ಪ ಸರ್ಕಾರಿ ಸೇವೆಯಲ್ಲಿದ್ದು, ವಯೋ ನಿವೃತ್ತಿ ಹೊಂದಿರುತ್ತಾರೆ. ಸದರಿಯವರು ಪರಿವೀಕ್ಷಣಾ ಟಿಪ್ಪಣಿ (2)(iii) (1) ರ

ಆಸ್ತಿಯಲ್ಲಿ 2003-04 ನೇ ಸಾಲಿನಲ್ಲಿ ಅವರ ಆದಾಯದಿಂದಲೇ ಮನೆ ನಿರ್ಮಾಣ ಮಾಡಿರುವುದಾಗಿ ನುಡಿದಿರುತ್ತಾರೆ. ತಮ್ಮ ತಂದೆ ಸರ್ಕಾರಿ ನೌಕರಿಯಿಂದ ನಿವೃತ್ತಿ ಹೊಂದಿದ ಬಗ್ಗೆ ಹಾಗೂ ಮೇಲ್ಕಂಡ ಸಾಲಿನಲ್ಲಿ ಮನೆ ನಿರ್ಮಿಸಿದ ಬಗ್ಗೆ ಯಾವುದೇ ದಾಖಲಾತಿಗಳನ್ನು ತಮ್ಮ ಸಮಜಾಯಿಷಿಯ ಜೊತೆ ಸಲ್ಲಿಸಿರುವುದಿಲ್ಲ.

9) ಎದುರುದಾರರು ಪರಿವೀಕ್ಷಣಾ ಟಿಪ್ಪಣಿ (2)(iii)(2) ರಲ್ಲಿ ರಾಯಲ್ ಎನ್‌ಫೀಲ್ಡ್ ಬೈಕ್ ಖರೀದಿಸಿರುವುದಾಗಿ ದಾಖಲೆ ಸಲ್ಲಿಸಿದ್ದು ಇರುತ್ತದೆ.

10) ಪರಿವೀಕ್ಷಣಾ ಟಿಪ್ಪಣಿ (2)(iii) (3) ರ ಪೋರ್ಡ್ ಫೀಗೋ ಕಾರ್ ಖರೀದಿಸಿರುವುದಾಗಿ ಮತ್ತು ಈ ಬಗ್ಗೆ ಅನುಬಂಧ-5 ರಂತೆ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದ ಬಗ್ಗೆ ದಾಖಲೆಯನ್ನು ಸಲ್ಲಿಸಿರುತ್ತಾರೆ.

11) ಪರಿವೀಕ್ಷಣಾ ಟಿಪ್ಪಣಿ (2)(iii) (4) ರ ಓಮ್ನಿ ಕಾರ್ ಕೆ.ಎ.-02-ಸಿ-1170 ವಾಹನವನ್ನು ಎದುರುದಾರರು ತಮ್ಮ ಹೆಸರಿನಲ್ಲಿ ಖರೀದಿಸಿ ಸರ್ಕಾರಕ್ಕೆ ವರದಿ ಮಾಡಿದ ಬಗ್ಗೆ ಅನುಬಂಧ-7 ನ್ನು ಲಗತ್ತಿಸಿರುತ್ತಾರೆ.

12) ಪರಿವೀಕ್ಷಣಾ ಟಿಪ್ಪಣಿ (2)(iii) (5) ರ ಪಲ್ಸರ್ ಬೈಕನ್ನು ಎದುರುದಾರರು ಖರೀದಿಸಿದ ನಂತರ ಸಕ್ಷಮ ಪ್ರಾಧಿಕಾರಕ್ಕೆ ತಿಳಿಸಿ ಅವರಿಂದ ಅನುಮೋದಿತ ಆದೇಶದ ಪತ್ರವನ್ನು ಲಗತ್ತಿಸಿರುವುದಿಲ್ಲ.

13) ಪರಿವೀಕ್ಷಣಾ ಟಿಪ್ಪಣಿ (2)(iii) (6) ರ ಹೀರೋ ಹೊಂಡಾ ಬೈಕನ್ನು ಎದುರುದಾರರು ಖರೀದಿಸಿದ ನಂತರ ಸಕ್ಷಮ ಪ್ರಾಧಿಕಾರಕ್ಕೆ ತಿಳಿಸಿ ಅವರಿಂದ ಅನುಮೋದಿತ ಆದೇಶದ ಪತ್ರವನ್ನು ಲಗತ್ತಿಸಿರುವುದಿಲ್ಲ.

14) ಪರಿವೀಕ್ಷಣಾ ಟಿಪ್ಪಣಿಗೆ ನೀಡಿದ ಸಮಜಾಯಿಷಿಯಲ್ಲಿ ಮೇಲ್ಕಂಡ ಚರ ಮತ್ತು ಸ್ಥಿರಾಸ್ತಿಗಳ ಮಾಹಿತಿ ಹೊರತುಪಡಿಸಿ ಉಳಿದ ಆಪಾದನೆಗಳ ಬಗ್ಗೆ ನಿರಾಕರಿಸಿರುವುದರ ಹೊರತಾಗಿ ಆಪಾದನೆಗಳನ್ನು ಅಲ್ಲಗೆಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಅವರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ.

15) ತನಿಖಾಧಿಕಾರಿಯವರು ಸಂಗ್ರಹಿಸಿದ ದಾಖಲೆಗಳಿಂದ ಎದುರುದಾರರು ಕಾನೂನು ಸಮ್ಮತ ಆದಾಯಕ್ಕಿಂತ ಅಸಮತೋಲನವಾಗಿ ಆಸ್ತಿಗಳನ್ನು ಅವರ ಹಾಗೂ ಅವರ ತಾಯಿ ಮತ್ತು ತಂದೆಯವರ ಹೆಸರಿನಲ್ಲಿ ಹೊಂದಿರುವುದು ಹಾಗೂ ಅನುಮತಿ ಇಲ್ಲದೆ ಸ್ಥಿರಾಸ್ತಿ/ಚರಾಸ್ತಿಯನ್ನು ಖರೀದಿಸಿರುವುದು ಹಾಗೂ ಇತರೆ ಅಂಶಗಳು

ಎದುರುದಾರರು ನಿಯಮಗಳನ್ನು ಪಾಲಿಸದೇ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

16) ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು, ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಸದರಿಯವರು ತಮ್ಮ ವಿರುದ್ಧದ ನಡವಳಿಯನ್ನು ಕೈ ಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

17) ಆದ್ದರಿಂದ ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಈ ಕೆಳಕಂಡಂತೆ ಶಿಫಾರಸ್ಸು ಮಾಡಲಾಗುತ್ತಿದೆ.

(1) ಎದುರುದಾರರ ವಿರುದ್ಧ ಅಸಮತೋಲನ ಆಸ್ತಿಯನ್ನು ಹೊಂದಲು ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಮತ್ತು ನಂತರದಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ತಿಳಿಸದೆ ಇರುವ ವಿಚಾರವಾಗಿ ಮಾತ್ರ ಇಲಾಖಾ ವಿಚಾರಣೆ ಮಾಡಲು ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957 ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿದೆ ಹಾಗೂ

(2) ಭಾರತದ ಸರ್ವೋಚ್ಛ ನ್ಯಾಯಾಲಯದ ತೀರ್ಪು AIR 1978 of Hon'ble Supreme Court, page 3047, State of Karnataka v/s Kempaiah, ಈ ಕೇಸಿನಲ್ಲಿ ಹೇಳಿರುವಂತೆ ಎದುರುದಾರರು ಕಾನೂನು ಸಮ್ಮತದ ಆದಾಯಕ್ಕಿಂತ ಅಸಮತೋಲನ ಆದಾಯವನ್ನು ಹೇಗೆ ಹೊಂದಿದರು ಎಂಬುದರ ಬಗ್ಗೆ ವಿಚಾರಣೆ ನಡೆಸಲು ಅವಕಾಶವಿರುವುದಿಲ್ಲ. ಆದುದರಿಂದ ಸದರಿ ವಿಷಯಕ್ಕೆ ಸಂಬಂಧಿಸಿದ ವಿಚಾರಣೆಯನ್ನು ಸರ್ಕಾರವೇ ಕರ್ನಾಟಕ ನಾಗರಿಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957 ರ ಅಡಿಯಲ್ಲಿ ವಿಚಾರಣೆ ಮಾಡಲು ಕ್ರಮ ಕೈಗೊಳ್ಳಬಹುದಾಗಿದೆ.

18). ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ <u>ಮೂರು ತಿಂಗಳೊಳಗೆ</u> ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

16/9/22

(ನ್ಯಾಯಮೂರ್ತಿ ಕೆ. ಎನ್. ಫಣೀಂದ್ರ)
ಉಪಲೋಕಾಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು.